ಪ್ರಿನ್ಸಿಪಾಲರಿಗೂ ತಲುಪಿತ್ತು. ಪ್ರಿನ್ಸಿಪಾಲ್ ಕೆಂಡಾಮಂಡಲವಾಗಿದ್ದರು. 'ಕಾಲೇಜನ್ನ ರೌಡಿಗಳ ಅಡ್ಡ ಮಾಡಿದೀರ ನೀವುಗಳು. ಅಶ್ವಿನ್ ರ್‍ಯಾಗಿಂಗ್ ವಿಷಯ ಕಾಲೇಜಲ್ಲಿ ಕಂಪ್ಲೆಂಟ್ ಮಾಡೋ ಬದಲು ಹೊರಗೆ ಯಾಕೆ ತಂದ. ಸಸ್ಪೆಂಡ್ ಮಾಡ್ತೀನಿ' ಅಂತ ಕುಳಿತಿದ್ದರು. ನಮ್ಮ ಗುಂಪಲ್ಲಿ ಲಾಯರ್ ಚಂದ್ರು ಇದ್ದ. ಸುಟ್ಟ ಗಾಯಗಳಿರುವ ಹುಡುಗನನ್ನು ಕರ್ಕೊಂಡು ಹೋಗಿ ಪೊಲೀಸ್ ಕಂಪ್ಲೆಂಟ್ ಕೊಡುವ ಲಾ ಪಾಯಿಂಟ್ ಚೆನ್ನಾಗಿ ಹಾಕಿದ. ಅಲ್ಲಿಗೆ ವಿಷಯ ಕೊನೆ ಆಯ್ತು.

ಶಂಕರನ ಅಪ್ಪ ಕಾಟನ್ ಮಿಲ್‌ನಲ್ಲಿ ಆಫೀಸರ್ ಹುದ್ದೆಯಲ್ಲಿದ್ದು ನಿವೃತ್ತಿ ಹೊಂದಿದ್ದವರು. ತಮ್ಮ ದುಡಿಮೆಯಲ್ಲೇ ಮನೆ ಮಾಡಿ, ಒಂದು ಸಣ್ಣ ಪೋರ್ಷನ್ ಬಾಡಿಗೆ ಬರುವ ಹಾಗೆ ಮಾಡಿಕೊಂಡಿದ್ದರು. ಮಗಳ ಮದುವೆ ಮಾಡಿ ಮುಗಿಸುವ ಹೊತ್ತಿಗೆ ಅವರ ಸೆಟಲ್‌ಮೆಂಟ್ ಹಣ ಪೂರ್ತಿ ಖಾಲಿ ಆಗಿತ್ತು. ಶಂಕರ ಅಪ್ಪರಮೇಲೂ ಒಂದು ಶಿಸ್ತು ಬದ್ಧವಾದ ದುಡಿಮೆಯ ಹಾದಿ ಹಿಡಿಯದ ಕಾರಣ, ಶಂಕರನ ತಂದೆ ಶಾಮರಾವ್ ಈಗಲೂ ದೇವಸ್ಥಾನದಲ್ಲಿ ಜೀವನೋಪಾಯಕ್ಕಾಗಿ ಅರ್ಚಕ ವೃತ್ತಿ ಮಾಡುತ್ತಾರೆ. ವಯಸ್ಸು ಎಪ್ಪತ್ತೈದು ದಾಟಿ, ಮಂತ್ರ ಹೇಳುವಾಗ ಧ್ವನಿ, ಆರತಿ ಮಾಡುವಾಗ ಕೈ ನಡುಕ ಎಷ್ಟರಮಟ್ಟಿಗೆ ಎಂದರೆ, ಆರತಿ ಮಾಡುವಾಗ ಸ್ವಯಂ ಶ್ರೀರಾಮನೇ ನಡುಗುತ್ತಾನೆ. ಇನ್ನು ತೀರ್ಥ ವಿನಿಯೋಗ ಮಾಡುವಾಗ ಚೆಲ್ಲದಂತೆ ತೀರ್ಥ ಸ್ವೀಕರಿಸೋದೆ ಭಕ್ತರಿಗೆ ದೊಡ್ಡ ಸವಾಲು. ಪುರೋಹಿತರ ಅಲ್ಲಾಡುವ ಕೈಗೆ ಅನುಗುಣವಾಗಿ ತಾವು ಅಲುಗಾಡಿಸಿ ಏನೇ ಕಷ್ಟಪಟ್ಟರೂ ಅರ್ಧ ತೀರ್ಥ ಚೆಲ್ಲಿ ಹೋಗಿರುತ್ತಿತ್ತು. ಇನ್ನೇನು ತಾನೇ ಮಾಡಿಯಾರು, ಸಿಕ್ಕಷ್ಟು ತೀರ್ಥವನ್ನೇ ಪಾಲಿಗೆ ಬಂದ ಪಂಚಾಮೃತವೆಂದು ಕಣ್ಣಿಗೆ ಒತ್ತಿಕೊಂಡು ಗುಟುಕರಿಸುತ್ತಿದ್ದರು. ಇಂತಹ ಮುದಿಜೀವ ಪಡೋ ಬವಣೆ ನೋಡಿ ಶಂಕರನಿಗೆ ಬೈದರೆ ಬೈಸಿಕೊಳ್ಳುತ್ತಾನೆ. ಏನು ಮಾತನಾಡುವುದಿಲ್ಲ. ಆದರೆ ಅಷ್ಟು ವಯಸ್ಸಾದ ಅಪ್ಪ ಅಮ್ಮ ಪಡುವ ಬವಣೆ ಅವನಲ್ಲಿ ಯಾವ ಬದಲಾವಣೆಯನ್ನೂ ತಂದಿಲ್ಲ. ಎಷ್ಟೋ ಸಾರಿ ಆತ್ಮೀಯವಾಗೂ ಹೇಳಿ ನೋಡಿದ್ದೀನಿ. ಜೀವನ ಹೀಗೆ ಬಾಳಬೇಕು ಅನ್ನುವ ಛಲ ಅವನಲ್ಲಿ ಕಾಣುತ್ತಾ ಇರಲಿಲ್ಲ. ಹುಂ ಹುಂ. ಅನ್ನುತ್ತಾ ಕೇಳಿಸಿಕೊಂಡು ಎದ್ದು ಹೋಗಿಬಿಡುತ್ತಿದ್ದ. ಮತ್ತೇ ಅದೇ ನಡವಳಿಕೆ. ಶಿಸ್ತಾಗಿ ಹಾಕುವ ಬಟ್ಟೆ, ಒಮ್ಮೊಮ್ಮೆ ಜುಬ್ಬಾ, ವಾಚು, ಬೈಕಲ್ಲಿ ಓಡಾಡುವ ಗಾಂಭೀರ್ಯ ನೋಡಿದರೆ ಕಾರ್ಪೊರೇಟರೋ ಅಥವಾ ಸಿನಿಮಾ ನಟನೋ ಅನ್ನಬೇಕು.

ಒಮ್ಮೆ ಶಂಕರ ದಿಢೀರ್ ಅಂತ ಫೋನ್ ಮಾಡಿ, ಆ ದಿನ ತನ್ನ ಮದುವೆ ನಡೆಯುವುದಾಗಿಯೂ, ತಕ್ಷಣವೇ ದುಗ್ಗಮ್ಮನ ಗುಡಿಗೆ ಬರಬೇಕಾಗಿಯೂ ತಿಳಿಸಿದ್ದರಿಂದ ಗಡಿಬಿಡಿಯಲ್ಲಿ ಹೊರಟೆ. ಇವನಪ್ಪ ಅಮ್ಮ ಅಂತೂ ಅವನಿಗೆ ಮದುವೆ ಮಾಡುವ ದುಸ್ಸಾಹಸಕ್ಕೆ ಕೈ ಹಾಕುವುದು ಸಾಧ್ಯವಿರಲಿಲ್ಲ. ಇಷ್ಟು ತಕ್ಷಣಕ್ಕೆ ಮದುವೆ ಕರೆ ಬಂತು ಅಂದರೆ ಏನೋ ಅನುಮಾನವೇ ಆಯ್ತು. 'ಏನೋ ಶಂಕರ ಮದುವೆ ಅಂತೀಯ. ಹುಡುಗಿ ಯಾರು? ಇಷ್ಟು ಅವಸರದಲ್ಲಿ ಯಾಕೆ?'

'ಪ್ರಮು ಲವ್ ಮ್ಯಾರೇಜ್ ಕಣೋ. ಒಬ್ಬರನ್ನೊಬ್ಬರು ತುಂಬಾ ಪ್ರೀತಿಸ್ತೀವಿ' ಅಂದ.

'ಶಂಕರ ಮದುವೆ ಆಗೋಕೆ ಏನು ತಯಾರಿ ಮಾಡಿಕೊಂಡಿದಿಯ? ಎಷ್ಟು ದುಡೀತಿಯ? ಜೀವನ ಅಂದರೆ ಏನು ತಿಳಕೊಂಡಿದ್ದೀಯ ನೀನು? ಜವಾಬ್ದಾರಿ ಗೊತ್ತಿಲ್ಲದ ಗೂಳಿ ನೀನು. ನಿನ್ನ ಅಪ್ಪ ಅಮ್ಮನಿಗೆ ಗೊತ್ತಾ? ಇಷ್ಟು ವಯಸ್ಸಾದ ನಿನ್ನನ್ನ ಅವರೇ ಸಾಕೋದಲ್ಲದೆ. ಯಾರು ಆ ಹುಡುಗಿ, ಎಲ್ಲಿ ತೋರಿಸು' ಅಂತ ಹೊರಟೆ. ನೋಡಿದ್ರೆ ಪಿ.ಯು. ಓದುವಾಗ ನನ್ನ ಕ್ಲಾಸ್‌ಮೇಟ್ ಆಗಿದ್ದ ಅಮೃತ. ಕಾಲೇಜಿನಲ್ಲಿ ಎಂದೂ ಯಾವುದೇ ಕಾಂಟ್ರೋವರ್ಸಿಗಳಿಲ್ಲದೆ ತಾನಾಯಿತು, ತನ್ನ ಓದಾಯಿತು ಅಂತ ಕಳೆದ ಮುಗ್ಧ ಸುಂದರಿ. ಯಾವ ಹುಡುಗನೂ ಹೋಗಿ ಇವಳನ್ನು ಮಾತಾಡಿಸೋಕೆ ಭಯಪಡುವಂತಹ ನಡವಳಿಕೆ. ಯಾವ್ಯಾವುದೋ ಎರಡು ಅಥವಾ ಮೂರು ಸಂದರ್ಭಗಳಲ್ಲಿ ನಾನು ಇವಳನ್ನು ಮಾತಾಡಿಸಿದ್ದೆ. ಮುಂದೆ ನಾನು ಇಂಜಿನಿಯರಿಂಗ್ ಸೇರಿದರೆ ಇವಳು ಬಿ.ಎಸ್ಸಿ. ಸೇರಿದ್ದಳು. ಅಪ್ಪ ಟೆಲಿಕಾಂ ಡಿಪಾರ್ಟಮೆಂಟಿನಲ್ಲಿ ಆಫೀಸರ್ ಎನ್ನುವುದೂ ನನಗೆ ಗೊತ್ತಿತ್ತು. ಒಂದು ಕ್ಷಣ ಆ ಸನ್ನಿವೇಶವನ್ನು ನಾನು ನಂಬದಾದೆ.

ಶಂಕರ ಅಮೃತಾಳಿಗೆ ಎಲ್ಲಿಯ ಮ್ಯಾಚು. ವರಸಾಮ್ಯ ಚೆನ್ನಾಗೇ ಇತ್ತು. ಆದರೆ ವಿದ್ಯಾಭ್ಯಾಸ, ಬುದ್ಧಿಮತ್ತೆ

'ಅಮೃತ ನನಗನ್ನಿಸಿದ್ದನ್ನು ಹೇಳಿಬಿಡ್ತೀನಿ. ಅದು ಹ್ಯಾಗೆ ಈ ಮದುವೆವರೆಗೂ ಬಂದಿದೆ ನಿಮ್ಮ ಸ್ನೇಹ? ನೀವು, ಶಂಕರ ಪರಸ್ಪರ ಅರ್ಥ ಮಾಡಿಕೊಂಡಿದ್ದೀ? ಇವನು ನನಗೆ ಬಾಲ್ಯ ಸ್ನೇಹಿತ, ಆತ್ಮೀಯ. ಸಂಬಂಧಿ. ಇವನಿಗೆ ಒಳ್ಳೆಯದೇನಾದರೂ ಆದರೆ ಅತಿ ಸಂತೋಷ ಪಡೋನೆ ನಾನು. ಆದರೂ ನೀವು ಇವನನ್ನು ಮದುವೆ ಆಗ್ತೀರ ಅಂದರೆ ನನಗೆ ನಂಬೋದು ಕಷ್ಟ'. ಶಂಕರ ಪಕ್ಕದಲ್ಲೇ ತಲೆತಗ್ಗಿಸಿ ನಿಂತಿದ್ದ.

'ಪ್ರಮೋದಣ್ಣ ನನಗೆ ಈ ಮಾತು ಹೇಳ್ತಿರೋರು ನೀವು ಮೊದಲನೆಯವರಲ್ಲ. ನನ್ನ ಅಪ್ಪ ಅಮ್ಮನಿಂದ ಹಿಡಿದು ನೂರು ಜನ ಹೇಳಿರಬಹುದು. ಕ್ಷಮಿಸಿ, ಆದರೆ ನನ್ನ ನಿರ್ಧಾರ ಮಾತ್ರ ಬದಲಾಗಲ್ಲ' ಅಂದಳು. ಕಣ್ಣುಗಳಲ್ಲಿ ಕಂಡಿದ್ದು ಆತ್ಮವಿಶ್ವಾಸವೋ ಅಥವಾ ಹಟವೋ ತಿಳೀಲಿಲ್ಲ. ಈ ಬಡ್ಡೀ ಮಗ ಅದೇನು ಮೋಡಿ ಮಾಡಿದ್ದಾನೋ ತಿಳೀಲಿಲ್ಲ. ಇಬ್ಬರ ಕಡೆಯೂ ಅಪ್ಪ ಅಮ್ಮ ಇಲ್ಲದ ನಾಲ್ಕೇ ಜನರಿದ್ದ ಮದುವೆಗೆ ಸಾಕ್ಷಿಯಾಗಿ ನಾಲ್ಕು ಅಕ್ಷತೆ ಹಾಕಿ ಬಂದಿದ್ದೆ.

ಮುಂದೆ ಬೆಂಗಳೂರಿನಲ್ಲಿ ನನ್ನ ಕೆಲಸ, ಓಡಾಟ, ಮದುವೆ, ಮಕ್ಕಳು ಇವೆಲ್ಲದರಲ್ಲಿ ಬ್ಯುಸಿಯಾಗಿದ್ದೆ. ಆದರೂ ಶಂಕರನ ವಿಷಯಗಳು ಅಮ್ಮನಿಂದ ಹಾಗೂ ನನ್ನ ಸ್ನೇಹಿತರಿಂದ ಆಗಾಗ ಕಿವಿಗೆ ಬೀಳುತ್ತಿದ್ದವು. ದೇವಸ್ಥಾನದಲ್ಲಿ ಅರ್ಚನೆ ಮಾಡುತ್ತಿದ್ದಾಗಲೇ ಶಂಕರನ ತಂದೆ ಸ್ಟ್ರೋಕ್ ಆಗಿ ಹಾಸಿಗೆ ಹಿಡಿದಿದ್ದರು. ಆಸ್ಪತ್ರೆಯ ಖರ್ಚಿಗೆ ಹಣ ಬೇಕಾಗಿ ಹಿಂದಿನ ಸಣ್ಣ ಮನೆಗೆ ತಾವುಗಳು ಹೋಗಿ ಮುಂದಿನ ದೊಡ್ಡ ಮನೆ ಲೀಜ್‌ಗೆ ಹಾಕಿಸಿಕೊಂಡಿದ್ದನ್ನು ಶಂಕರನೇ ಹೇಳಿದ್ದ. ಶಂಕರನ ಹೆಂಡತಿ ಅಮೃತ ದಾವಣಗೆರೆಯಲ್ಲೇ ಯಾವುದೋ ಕೆಮಿಕಲ್ ಲ್ಯಾಬೊರೆಟರಿಯಲ್ಲಿ ಕೆಲಸಕ್ಕೆ ಸೇರಿದ್ದಳು. ಶಂಕರ ತನ್ನ ದುಡಿಮೆ ರಿಯಲ್ ಎಸ್ಟೇಟ್, ಸ್ಟೀಲ್ ಪರ್ಚೇಸ್ ಅಂಡ್ ಸೇಲ್ಸ್ ಅಂತ ಏನೆಲ್ಲಾ ಹೇಳಿದರೂ, ಮೊದಲಿನಿಂದ ಇವನನ್ನು ನೋಡಿದ್ದ ನನಗೆ ನಂಬಿಕೆ ಬರಲಿಲ್ಲ. ಪ್ರತಿ ಸರಿ ದಾವಣಗೆರೆಗೆ ಹೋದಾಗಲೂ ಶಂಕರ ಬಂದು ಭೇಟಿ ಮಾಡುತ್ತಿದ್ದ. ಅಪ್ಪ ಅಮ್ಮ ಇಬ್ಬರೇ ಅಲ್ಲಿರೋದರಿಂದ ಅವರಿಗೆ ಏನಾದರೂ ಸಹಾಯ ಬೇಕೆಂದರೆ ತಕ್ಷಣವೇ ಶಂಕರ ಒದಗುತ್ತಿದ್ದ. ಅವನು ಅಲ್ಲೇ ಇದ್ದಾನೆ ಅನ್ನೋದೆ ನನಗೆ ಒಂದು ಸಮಾಧಾನದ ವಿಷಯವಾಗಿತ್ತು. ಒಮ್ಮೆ ದಾವಣಗೆರೆಗೆ ಹೋದಾಗ ಶಂಕರ ಕಾಲಿಗೆ ಗಾಯ ಮಾಡಿಕೊಂಡು ಆಸ್ಪತ್ರೆಯಲ್ಲಿರೋ ವಿಷಯ ಅಮ್ಮ ತಿಳಿಸಿದಳು. ನೋಡೋಕೆ ಬಾಪೂಜಿ ಆಸ್ಪತ್ರೆಗೆ ಹೋದೆ. ಬಲಗಾಲ ಪಾದಕ್ಕೆ ದಪ್ಪ ಬ್ಯಾಂಡೇಜ್ ಕಟ್ಟಿಕೊಂಡು ಮಲಗಿದ್ದ. ಏನಾಯಿತು ಅಂತ ಕೇಳಿದರೆ ಇಷ್ಟುದ್ದ ಕಥೆಯನ್ನೇ ಶುರು ಮಾಡಿದ. 'ತನ್ನದು ಸ್ಟೀಲ್ ಬ್ಯುಸಿನೆಸ್ ಅಲ್ವಾ? ಸ್ಟೀಲ್ ನೋಡೋಕೆ ಅಂತ ಹೋಗಿದ್ದೆ. ಕತ್ತಲಲ್ಲಿ ಕಾಣದೆ ಕಾಲಿಟ್ಟೆ. ಮೆಟಲ್ ತುಂಡು ಚುಚ್ಚಿ ಪಾದದ ಒಳಗೆ ಮೂಳೆ ಕ್ರ್ಯಾಕ್ ಆಗಿದೆ. ಆಪರೇಷನ್ ಆಯ್ತು' ಅಂದ.

'ಯಾಕೆ ಕಾಲಲ್ಲಿ ಚಪ್ಪಲಿ ಇರಲಿಲ್ವಾ' ಎನ್ನುವ ಪ್ರಶ್ನೆಗೆ ಉಡಾಫೆಯ ನಗು ನಕ್ಕ. ಅಷ್ಟರಲ್ಲಿ ಶಂಕರನ ಹೆಂಡತಿ ಅಮೃತ ಊಟದ ಡಬ್ಬಿ ಹಿಡಿದು ನಗುತ್ತಾ ಒಳಬಂದಳು. ಆರೇಳು ತಿಂಗಳ ಗರ್ಭಿಣಿ ಇರಬಹುದು. ಬಿಸಿಲಲ್ಲಿ ಬಂದಿದ್ದರಿಂದ ಹಣೆ ಹಾಗೂ ಕುತ್ತಿಗೆಯ ಬೆವರನ್ನು ಸೀರೆಯ ಸೆರಗಲ್ಲಿ ಒರೆಸಿಕೊಳ್ಳುತ್ತಾ ಉಸ್ಸಪ್ಪ ಅಂತ ಕುಳಿತಳು. 'ಅಮೃತಾ, ಇಂತಹ ಬಿಸಿಲಲ್ಲಿ ಯಾಕೆ ತರೋಕೆ ಹೋದ್ರೆ. ಹೇಳಿದ್ನಲ್ಲ, ನಾನು ಕ್ಯಾಂಟೀನ್‌ಗೆ ಹೋಗಿ ತಿಂದು ಬರ್ತೀನಿ ಅಂತ' ಅಂದ ಶಂಕರ.

'ಆಪರೇಷನ್ ಆಗಿ ನಾಲ್ಕು ದಿನ ಓಡಾಡಲೇಬಾರದು ಅಂತ ಡಾಕ್ಟರ್ ಹೇಳಿಲ್ವಾ? ಮತ್ತೆ ಒಂದು ಹೋಗಿ ಒಂದು ಆಗುತ್ತೆ. ನಾಲ್ಕು ದಿನ ಓಡಾಡಬೇಡಿ ಅಷ್ಟೆ' ಅಂದಳು ಅಮೃತ.

ಸ್ವಲ್ಪ ಹೊತ್ತು ಮಾತಾಡುತ್ತ ಕುಳಿತಿದ್ದೆ. ಅಸಹನೀಯವಾದ ಘಾಟು ವಾಸನೆ ಬರುತ್ತಿತ್ತು. 'ಶಂಕರ ಏನೋ ಇಷ್ಟೊಂದು ಅಮೃತಾಂಜನ ಹಚ್ಚಿಕೊಂಡಿದೀಯ' ಅಂದೆ.

ಅದಕ್ಕೆ ಶಂಕರ, 'ಅಯ್ಯೋ, ಅಮೃತಾಂಜನದ ಡಿಪಾರ್ಟ್‌ಮೆಂಟ್ ಏನಿದ್ದರೂ ನನ್ನ ಹೆಂಡತಿಯದಪ್ಪ. ಬೆಳಿಗ್ಗೆ, ಮಧ್ಯಾಹ್ನ, ರಾತ್ರಿ ಯಾವಾಗಲೂ ಇರಲೇಬೇಕು. ಎಷ್ಟು ಹೇಳಿದರೂ ಕೇಳಲ್ಲ. ಮೊದ ಮೊದಲು ನಂಗೂ ಬಹಳ ಹಿಂಸೆ ಆಗ್ತಿತ್ತು. ಈಗ ಅಡ್ಜೆಸ್ಟ್ ಆಗಿಬಿಟ್ಟೀನಿ ನೋಡು. ಎಷ್ಟು ಅಂದರೆ ನಂಗೆ ತಲೆನೋವು ಬಂದರೂ ನಾನು ಹಚ್ಚಿಕೊಳ್ಳ. ಪಕ್ಕದಲ್ಲಿ ಇವಳು ಹಚ್ಚಿಕೊಂಡು ಮಲಗಿರ್ತಾಳಲ್ಲ, ಅದರಲ್ಲೇ ಹುಷಾರಾಗಿಬಿಡ್ತೀನಿ' ಎಂದು ತನ್ನ ಜೋಕ್‌ಗೆ ತಾನೇ ಗಹಗಹಿಸಿ ನಗಹತ್ತಿದ. 'ನಾನು ಇವಳಿಗೆ ಅಮ್ಮ